ವಿ ರೈತ ಮಿತ್ರ

ಭವಿಷ್ಯದಲ್ಲಿ ಲಾಭ ತಂದುಕೊಡಬಹುದಾದ ಹಣ್ಣಿನ ಬೆಳೆಗಳಾವುವು?

ರಾಜೇಶ್ ಬೆಂಗಳೂರು

ಭವಿಷ್ಯದಲ್ಲಿ ಡ್ರ್ಯಾಗನ್ ಫ್ರೂಟ್, ಬಿಲ್ವಪತ್ರೆ ಹಣ್ಣು, ಅಮಟೆಕಾಯಿ, ಚಿರೋಂಜಿ ಹಣ್ಣು, ನೆಲ್ಲಿಕಾಯಿ, ಅಂಜೂರ, ನೇರಳೆ, ಹಲಸು, ಕೇರು, ಸೀತಾಫಲ, ಬಳವಾಲ, ಬೆಣ್ಣೆಹಣ್ಣುಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಪ್ರಸ್ತುತ ವಾಣಿಜ್ಯವಾಗಿ ಮುಖ್ಯ ಬೆಳೆಯಾಗಿ ಬೆಳೆಯುತ್ತಿಲ್ಲ. ಆದಾಗ್ಯೂ ಹೆಚ್ಚಿನ ಪೋಷಕಾಂಶ (ಅಧಿಕ ಜೀವಸತ್ವ, ಖನಿಜಗಳು, ನಾರಿನ ಅಂಶ, ಉತ್ಕರ್ಷಣ ನಿರೋಧಕಗಳು ಹಾಗೂ ಅಲ್ಕಲಾಯ್ಡ್‌ಗಳು) ಹಾಗೂ ಔಷಧೀಯ ಗುಣಗಳುಳ್ಳ ಹಣ್ಣುಗಳು ಇವಾಗಿದ್ದು, ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಹೆಚ್ಚಿನ ಬೇಡಿಕೆ, ಮಾರುಕಟ್ಟೆ ಮೌಲ್ಯ ತಂದುಕೊಡಬಲ್ಲವಾಗಿವೆ. ಕೃಷಿಕರ ದೃಷ್ಟಿಯಿಂದಲೂ ಹೆಚ್ಚಿನ ಆದಾಯ, ಬರ ಸಹಿಷ್ಣುತ ಶಕ್ತಿಯನ್ನು ಹೊಂದಿದ್ದು, ಸಮಸ್ಯಾತ್ಮಕ ಮಣ್ಣಿನಲ್ಲಿಯೂ ಈ ಹಣ್ಣುಗಳನ್ನು ಬೆಳೆಯಬಹುದು.



ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಗೇರು ಬೆಳೆಯಲ್ಲಿ ಕಾಂಡಕೊರಕ ಬಾಧೆ ನಿಯಂತ್ರಿಸುವುದು ಹೇಗೆ?

ಗಣೇಶ್ ಶ್ರೀನಿವಾಸಪುರ

ಕಾಂಡಕೊರಕ ಕೀಟ ಬಾಧಿತ ಮರಗಳಲ್ಲಿ ಹಸಿರು ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರಲು ಪ್ರಾರಂಭಿಸುತ್ತವೆ. ಟೊಂಗೆಗಳು ಒಣಗಲಾರಂಭಿಸಿ ಕಾಂಡದ ತೊಗಟೆಯು ಬಿರುಕು ಬಿಡುತ್ತದೆ.

ನಿರ್ವಹಣೆ: ಹಾನಿಯಾದ ಭಾಗಗಳಿಂದ ಹುಳುಗಳನ್ನು ಉಳಿಯಿಂದ ಕೆತ್ತಿ ಹೊರತೆಗೆದು ನಾಶಪಡಿಸಬೇಕು. ಮರಿಹುಳು ಮರದ ನಡು ಭಾಗದ ಒಳಕ್ಕೆ ಹೋಗಿದ್ದರೆ, ಅವುಗಳನ್ನು ಲೋಹದ ತಂತಿಯನ್ನು ಸುರಂಗದ ಒಳಕ್ಕೆ ತೂರಿಸಿ ಬಿಳಿದ್ರವ ಹೊರ ಬರುವವರೆಗೂ ಪದೇಪದೆ ಚುಚ್ಚಬೇಕು. ಕೆತ್ತಿ ತೆಗೆದಂತಹ ತೊಗಟೆಯ ಭಾಗಕ್ಕೆ ಒಂದು ಲೀಟರ್ ನೀರಿಗೆ 10 ಮೀ.ಲೀ. ಕ್ಲೋರೊಪೈರಿಫೊಸ್ 20 ಇ.ಸಿ. ಮತ್ತು 20 ಗ್ರಾಂ ಕಾಪರ್ ಆಕ್ಸಿಕ್ಲೋರೈಡ್ ಮಿಶ್ರಣ ಮಾಡಿ ದ್ರಾವಣವನ್ನು ಲೇಪಿಸಬೇಕು.

ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

11-04-2022 Vv Pg 11

11-04-2022 Vv Pg 09



ಭಾರತದ ಕೃಷಿ ರಫ್ತು 50 ಶತಕೋಟಿ ಡಾಲರ್

ನ್ಯಾಷನಲ್ ಪ್ಲಾಂಟ್ ಪ್ರೊಟೆಕ್ಷನ್ ಆರ್ಗನೈಸೇಷನ್‌ಗಳ ನಡುವೆ ಹಲವು ಸುತ್ತಿನ ಮಾತುಕತೆಯ ಬಳಿಕ ಕೆನಡಾದ ಮಾರುಕಟ್ಟೆಗೆ ಭಾರತದ ಬಾಳೆ ಹಣ್ಣು ಮತ್ತು ಬೇಬಿ ಕಾರ್ನ್ ಪ್ರವೇಶಿಸಿದೆ. 2021-22ನೇ ಸಾಲಿನಲ್ಲಿ ಸಾರ್ವಕಾಲಿಕ ಗರಿಷ್ಠ 50 ಶತಕೋಟಿ ಡಾಲರ್ (3,76,575 ಕೋಟಿ ರೂಪಾಯಿ) ದಾಟಿದೆ.

- ಆಟೋಮ್ಯಾಟೆಡ್ ಇಂಪೋರ್ಟ್ ರೆಫರೆನ್ಸ್ ಸಿಸ್ಟಮ್ ಮೂಲಕ ಈ ತಿಂಗಳಲ್ಲೇ ಕೆನಡಾಕ್ಕೆ ತಾಜಾ ಬೇಬಿ ಕಾರ್ನ್ ಮತ್ತು ಬಾಳೆಹಣ್ಣುಗಳನ್ನು ಭಾರತ ರಫ್ತು ಮಾಡಲಿದೆ.
- ಕೋವಿಡ್ ಸಂಕಷ್ಟದ ಬಳಿಕ ದೇಶದ ಕೃಷಿ ಉತ್ಪನ್ನಗಳ ರಫ್ತು ಶೇಕಡ 20 ಏರಿದ್ದು, 50.21 ಶತಕೋಟಿ ಡಾಲರ್‌ಗೆ ತಲುಪಿದೆ.
- ಕೃಷಿ ಉತ್ಪನ್ನಗಳು ಗಮನಾರ್ಹ ಬೆಳವಣಿಗೆ ದಾಖಲಿಸಿದ್ದು, ಅಕ್ಕಿ (9.65 ಶತಕೋಟಿ ಡಾಲರ್), ಗೋಧಿ (2.19 ಶತಕೋಟಿ ಡಾಲರ್), ಸಕ್ಕರೆ (4.5 ಶತಕೋಟಿ ಡಾಲರ್), ಇತರೆ ಧಾನ್ಯಗಳು (1.08 ಶತಕೋಟಿ ಡಾಲರ್) ರಫ್ತು ಆಗಿದೆ.
- ಗೋಧಿ ರಫ್ತು ಪ್ರಮಾಣ ಶೇಕಡ 273 ಕ್ಕೂ ಹೆಚ್ಚು ಏರಿಕೆ ಆಗಿದೆ. 2020-21ರಲ್ಲಿ 4,173 ಕೋಟಿ ರೂ. ಇದ್ದದ್ದು, 2021-22ರಲ್ಲಿ 15,890 ಕೋಟಿ ರೂಪಾಯಿ ಆಗಿದೆ.
- ಭಾರತದ ಅಕ್ಕಿ ರಫ್ತು ಪ್ರಮಾಣ ಶೇಕಡ 9.35 ಹೆಚ್ಚಳವಾಗಿ 2021-22ರಲ್ಲಿ 72,412 ಕೋಟಿ ರೂಪಾಯಿ ಆಗಿದೆ. 2020-21ರಲ್ಲಿ ಇದು 66,225 ಕೋಟಿ ರೂಪಾಯಿ ಆಗಿತ್ತು.
- ಸಾಗರ ಉತ್ಪನ್ನಗಳ ರಫ್ತು ಪ್ರಮಾಣ ಸತತ ಎರಡನೇ ವರ್ಷವೂ 400 ಕೋಟಿ ಡಾಲರ್ ಮೀರಿದ್ದು, ಕಳೆದ ವರ್ಷ 7.71 ಶತಕೋಟಿ ಡಾಲರ್ ತಲುಪಿದೆ.
- ಕಾಫಿ ರಫ್ತು ಪ್ರಮಾಣ ಹಲವು ಸವಾಲುಗಳಿದ್ದರೂ ಕೂಡ ಇದೇ ಮೊದಲ ಸಲ 100 ಕೋಟಿ ಡಾಲರ್ ದಾಟಿದೆ.

vittasuggi@gmail.com

ವಿತ್ತವಾಣಿ

ಮನೆ ಮನೆಯ ಮನಿಮಾತು



ಕಬ್ಬಿನ ಗದ್ದೇಲಿ ನರ್ಸರಿ ಸಸಿ ರೈತರಿಗೆ ಆದಾಯದ ಸಿಹಿ

ಸಾಂಪ್ರದಾಯಿಕ ಬೇಸಾಯ ಪದ್ಧತಿಯಿಂದ ಈಗಾಗಲೆ ಆಧುನಿಕ ಕೃಷಿಯತ್ತ ಮುಖಮಾಡಿರುವ ರೈತರು, ತಾವೇ ಬೀಜ ಬಿತ್ತಿ ಬೆಳೆ ತೆಗೆಯುವ ಪದ್ಧತಿಯಿಂದ ಬಹುತೇಕ ಹೊರ ಬರುತ್ತಿದ್ದಾರೆ. ನರ್ಸರಿಗಳಲ್ಲಿ ಕಾಳಜಿಯಿಂದ ಬೆಳೆಸಿದ ಸಸಿಗಳನ್ನು ತಂದು ನಾಟಿ ಮಾಡಿ ಅಧಿಕ ಇಳುವರಿ ಪಡೆಯುತ್ತಿದ್ದಾರೆ. ಕಬ್ಬು ಬೆಳೆಯೂ ಇದರಿಂದ ಹೊರತಾಗಿಲ್ಲ. ಬೆಳೆಗಾರರು ನರ್ಸರಿಗಳಿಂದ ಕಬ್ಬಿನ ಸಸಿಗಳನ್ನು ತಂದು ಅಧಿಕ ಆದಾಯ ಗಳಿಸುತ್ತಿದ್ದಾರೆ.

ಮಂಜುನಾಥ ಕೋಳಿಗುಡ್ಡ ಬೆಳಗಾವಿ

ಹೆಚ್ಚುತ್ತಿರುವ ಕೂಲಿ, ಏರುತ್ತಿರುವ ರಸಗೊಬ್ಬರ ಬೆಲೆ, ಬಿತ್ತನೆ ಬೀಜದ ದರ, ಯಂತ್ರೋಪಕರಣಗಳ ಬಾಡಿಗೆ, ಇಂಧನದ ಬೆಲೆ ಹೆಚ್ಚಳ ಹಾಗೂ ಕಬ್ಬಿನ ಬಿಲ್ ಕೈ ಸೇರದೆ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಕೆಲ ರೈತರು ಸದ್ಯ ನರ್ಸರಿ ಕಬ್ಬಿನ ನರ್ಸರಿ ಸಸಿಗಳತ್ತ ಮುಖ ಮಾಡುತ್ತಿದ್ದಾರೆ. ಸಾಂಪ್ರದಾಯಿಕ ವಿಧಾನದಲ್ಲಿ ಕಬ್ಬು ಬೆಳೆಯಲು ಪ್ರತಿ ಎಕರೆಗೆ ಸರಾಸರಿ 3.5 ರಿಂದ 4 ಟನ್ ಕಬ್ಬಿನ ಬೀಜ ಬೇಕು. ಅಲ್ಲದೆ, ಎಕರೆಗೆ 30 ರಿಂದ 38 ಸಾವಿರ ರೂ. ಹಣ ಖರ್ಚಾಗುತ್ತದೆ. ಆದರೆ, ನರ್ಸರಿ ವಿಧಾನದಲ್ಲಿ ಎಕರೆಗೆ 7.5ರಿಂದ 8 ಕ್ವಿಂಟಾಲ್ ಬೀಜ ಅವಶ್ಯವಿದೆ. ಎಕರೆಗೆ 15 ರಿಂದ 18 ಸಾವಿರ ರೂ. ವರೆಗೆ ವೆಚ್ಚವಾಗುತ್ತದೆ. ಒಟ್ಟಾರೆ ನರ್ಸರಿ ಸಸಿ ನಾಟಿ ಮಾಡುವುದರಿಂದ ಎಕರೆಗೆ ಸರಾಸರಿ 18 ಸಾವಿರ ರೂ. ಉಳಿತಾಯವಾಗುವುದರ ಜತೆಗೆ ಇಳುವರಿ ಪ್ರಮಾಣವೂ ಹೆಚ್ಚುತ್ತದೆ. ಆರ್ಥಿಕ ಚೇತರಿಕೆ ಉದ್ದೇಶದಿಂದ ಸದ್ಯ ಬೆಳೆಗಾರರು ನರ್ಸರಿ ಕಬ್ಬಿನ ಸಸಿಗಳತ್ತ ಮುಖ ಮಾಡುತ್ತಿದ್ದಾರೆ. ಇದು ಉತ್ತಮ ಇಳವರಿಯೊಂದಿಗೆ ಲಾಭದಾಯಕ ಕೃಷಿಗೆ ಪೂರಕವಾಗಿದೆ. 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ 5.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಈ ಪೈಕಿ 80 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನರ್ಸರಿ ಕಬ್ಬಿನ ಸಸಿಗಳನ್ನು ನಾಟಿ ಮಾಡಿ, ಕಬ್ಬು ಬೆಳೆಯಲಾಗಿದೆ. ಆಯಾ ಪ್ರದೇಶದ ಮಣ್ಣಿನ ಫಲವತ್ತತೆ ಆಧರಿಸಿ ಎಕರೆಗೆ ಸರಾಸರಿ 50 ರಿಂದ 61 ಟನ್ ವರೆಗೆ ಇಳುವರಿ ಇದೆ.

ಪ್ರಸಕ್ತ ಸಾಲಿನಲ್ಲಿ ನರ್ಸರಿಯಲ್ಲಿ ಬೆಳೆದಿರುವ ಕಬ್ಬಿನ ಸಸಿಗಳನ್ನು ನಾಟಿ ಮಾಡಲು ರೈತರ ಮುಂದಾದ ಕಾರಣ ಕಬ್ಬಿನ ಸಸಿಗಳ ಬೇಡಿಕೆ ಪ್ರಮಾಣವೂ ಅಧಿಕವಾಗಿದೆ.

ಕಬ್ಬಿನ ಬೀಜ ದರ ಏರಿಕೆ: ಕಬ್ಬಿನ ಪ್ರದೇಶ ವಿಸ್ತರಣೆಯಾಗುತ್ತಿರುವ ಬೆನ್ನಲ್ಲೇ ಕಬ್ಬಿನ ಬೀಜದ ದರ ದುಬಾರಿಯಾಗಿದೆ. 180024 (ತಿಳಿ ಹಸಿರು), 86032 (ಕೆಂಪು), 8005 (ತಿಳಿ ಹಸಿರು), ಸಿಒಸಿ 671(ಗಂಗಾವತಿ), ಸಿಒ 91010 (ಬಿಳಿ ಕಬ್ಬು) ಹೀಗೆ ವಿವಿಧ ತಳಿಯ ಬೀಜಗಳು ಟನ್‌ಗೆ 4,200 ರಿಂದ 5,000 ರೂ. ವರೆಗೆ ಮಾರಾಟವಾಗುತ್ತಿದೆ ಎನ್ನುತ್ತಾರೆ ಅಧಿಕಾರಿಗಳು.

ರಾಜ್ಯದಲ್ಲಿ ಕಬ್ಬಿನ ಪ್ರದೇಶ
(ಸರಾಸರಿ ವಿವರ)

ವರ್ಷ	ಕಬ್ಬಿನ ಪ್ರದೇಶ (ಲಕ್ಷ ಹೆಕ್ಟೇರ್‌ಗಳಲ್ಲಿ)
2018	4.10
2019	4.35
2020	4.80
2021	5.20
2022	5.16 (2022ರ ಮಾ.31ರ ವರೆಗೆ)

ಸಾಂಪ್ರದಾಯಿಕ ವಿಧಾನದಲ್ಲಿ ಕಬ್ಬು ನಾಟಿ ಮಾಡಿದರೆ ಮೊಳಕೆ ಒಡೆಯಲು 1 ತಿಂಗಳು ಬೇಕು. ಆದರೆ, ನರ್ಸರಿಯಲ್ಲಿ ಕಬ್ಬಿನ ಸಸಿಗಳು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ನೀಡುತ್ತವೆ. ಕೆಲ ರೈತರು ಸ್ವತಃ ಕಬ್ಬಿನ ಸಸಿ ತಯಾರಿಸಿ ನಾಟಿ ಮಾಡಿಕೊಳ್ಳುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ನರ್ಸರಿ ಕಬ್ಬಿನ ಸಸಿಗಳ ಬೇಡಿಕೆ ವೃದ್ಧಿಸುತ್ತಿದೆ.

| ಶಿವನಗೌಡ ಪಾಟೀಲ ಕೃಷಿ ಇಲಾಖೆ ಜಂಟಿ ನಿರ್ದೇಶಕ



ಒಂದು ಸಸಿಗೆ 2.25 ರೂ.

ನರ್ಸರಿಯಲ್ಲಿ ಕಬ್ಬಿನ ಕೋಶ ಮಾತ್ರ ಕತ್ತರಿಸಿ ಅದನ್ನು ಪ್ಲಾಸ್ಟಿಕ್ ಟ್ರೇನಲ್ಲಿ ಹಾಕಿ ಸಸಿ ಬೆಳೆಸಲಾಗುತ್ತದೆ. ಇದಕ್ಕಾಗಿ ಕೋಕೊ ಪಿಟ್ (ತೆಂಗಿನ ನಾರು ಪುಡಿ) ಮತ್ತು ಮೂರು ತರಹದ ರಸಾಯನಿಕಗಳನ್ನು ಬಳಸಿ ಹದವಾದ ಮಣ್ಣಿನ ಮಾದರಿಯ ವಸ್ತುವನ್ನು ಸಿದ್ಧಪಡಿಸಲಾಗುತ್ತದೆ. ಇದನ್ನು ಪ್ಲಾಸ್ಟಿಕ್ ಟ್ರೇನಲ್ಲಿ ಹಾಕಿ, ಅದರಲ್ಲಿ ಕಣ್ಣನ್ನು ನೆನೆಹಾಕಿ, ಏಳು ದಿನಗಳ ಬಳಿಕ ಪ್ಲಾಸ್ಟಿಕ್ ಹಾಕಿ, ತೇವಾಂಶದಲ್ಲಿ ವ್ಯತ್ಯಯವಾಗದಂತೆ ಜೋಪಾನ ಮಾಡಲಾಗುತ್ತದೆ. ಸಸಿಗಳು 40 ಇಂಚು ಬೆಳೆದ ನಂತರ ಆರೈಕೆ ಮಾಡಿ ನಂತರ ಜಮೀನಿನಲ್ಲಿ ನಾಟಿ ಮಾಡಲಾಗುತ್ತದೆ. ಒಂದು ಸಸಿಗೆ 2.25 ರೂ. ದಿಂದ 3 ರೂ. ವರೆಗೆ ಮಾರಾಟವಾಗುತ್ತದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ನಂಜನಗೂಡಿನಲ್ಲಿ ಬೃಹತ್ ಆಡು ಸಾಕಣೆ ಕೇಂದ್ರ ನಿರ್ಮಾಣ

INDUS 555-D TMT Presents
ರೈತ ರತ್ನ ಪ್ರಶಸ್ತಿ Season 2
Co Presented by ಅಗ್ರಿಮೇಟ್
asianet ಸುವರ್ಣ ನ್ಯೂಸ್ ನಂಬರ್ ಒನ್ ನಿರಂತರ
ಕನ್ನಡಪ್ರಭ
Special Partner
ಸದ್ಗುರು ಆಯುರ್ವೇದ
Powered by
VSTAAR NONI JUICE

ಆಡು ಸಾಕಣೆಯಲ್ಲಿ ಕ್ರಾಂತಿ ಮಾಡಿದ ಶ್ರೀನಿವಾಸ್

ಕನ್ನಡಪ್ರಭ, ಸುವರ್ಣನ್ಯೂಸ್ ಪ್ರದಾನ ಮಾಡುವ ರೈತರತ್ನ 2022 ಪ್ರಶಸ್ತಿ ನಂಜನಗೂಡಿನ ಯಡಹಳ್ಳಿಯ ರೈತ ಶ್ರೀನಿವಾಸ್ ಅವರಿಗೆ ಸಂದಿದೆ. ಸಾಧಕ ರೈತನಿಗೆ ಗೌರವ ಸಮರ್ಪಣೆ.



• ಎಚ್.ಡಿ.ರಂಗಸ್ವಾಮಿ

ನಂಜನಗೂಡು ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ 50 ಎಕರೆ ಜಮೀನನ್ನು ಖರೀದಿಸಿ ಬೃಹತ್ ಆಡು ಸಾಕಾಣಿಕಾ ಕೇಂದ್ರವನ್ನು ತೆರೆದಿರುವ ರೈತ ಶ್ರೀನಿವಾಸ್. ಇವರು ಆಡಿನ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿ ಇತರ ರೈತರಿಗೆ ಮಾದರಿಯಾಗಿದ್ದಾರೆ.

ಸುಮಾರು 2 ಸಾವಿರ ಮೇಕೆಗಳನ್ನು ಸಾಕಬಹುದಾದ 'ಯಶೋವನ' ಎಂಬ ಬೃಹತ್ ಮೇಕೆ ಸಾಕಾಣಿಕೆ ಫಾರಂ ಇವರ ಕನಸಿನ ಕೂಸು. ಇವರ ಯಶೋವನ ದೇಶದಲ್ಲಿಯೇ ಬೃಹತ್ ಗೋಟ್ ಫಾರಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜೊತೆಗೆ ಪ್ರತಿ ಮಂಗಳವಾರ ಆಸಕ್ತಿ ಹೊಂದಿರುವ ರೈತರಿಗೆ ಆಡು ಸಾಕಣೆ ತರಬೇತಿಯನ್ನು ನೀಡುತ್ತಾರೆ. ಇದುವರೆಗೆ 25 ಸಾವಿರಕ್ಕಿಂತಲೂ ಹೆಚ್ಚು ರೈತರಿಗೆ ತರಬೇತಿಯನ್ನು ನೀಡಿರುವುದು ಸಣ್ಣ ಸಾಧನೆಯಲ್ಲ. ಜೊತೆಗೆ ಪಶು ಸಾಕಾಣಿಕೆ ಶಿಬಿರಗಳಲ್ಲೂ ತರಬೇತಿ ನೀಡಿದ್ದಾರೆ.

ಮೂಲತಃ ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿಯಾದ ಶ್ರೀನಿವಾಸ್ ಓದಿದ್ದು, ಬಿ.ಕಾಂ ಪದವಿ. ಉನ್ನತ ಶಿಕ್ಷಣ ಪಡೆಯುವುದು ಸಾಧ್ಯವಾಗಲಿಲ್ಲ. ಆದರೆ ಕೃಷಿ ಆಸಕ್ತಿ ಕೈ ಹಿಡಿಯಿತು. ಪೌಲ್ಟ್ರಿ ಟ್ರೇಡಿಂಗ್ ತರಬೇತಿ ಪಡೆದರು. ಬಳಿಕ ಯಡಹಳ್ಳಿಯಲ್ಲಿ ಆಡು ಸಾಕಣೆ ಕೇಂದ್ರ ಶುರು ಮಾಡಿದರು. ಪರಿಣಿತರನ್ನು ಸಂಪರ್ಕಿಸಿ ಮೇಕೆ ಸಾಕಲು ಪ್ರಾರಂಭಿಸಿದರು. ಆದರೆ ಮೊದಲ ತಿಂಗಳಲ್ಲೇ 165 ಮೇಕೆ ಮೃತಪಟ್ಟವು. ಬಳಿಕ ಕೊಟ್ಟಿಗೆ ಪದ್ಧತಿಯಲ್ಲಿ ಆಡು ಸಾಕಣೆಗೆ ಮುಂದಾಗಿದ್ದು ಇವರ ಕೈ ಹಿಡಿಯಿತು. 'ಕೊಟ್ಟಿಗೆ ಪದ್ಧತಿಗೆ ಅನುಕೂಲವಾಗುವಂಥಾ, ರೋಗ ನಿರೋಧಕ ಶಕ್ತಿ ಇರುವ, ಉತ್ತಮ ತೂಕ ಬರುವ, ಹಾಲು ಕೊಡುವ ಮೇಕೆಗಳನ್ನು ಇಟ್ಟುಕೊಂಡರೆ ಗೆಲ್ಲಲು ಸಾಧ್ಯ ಎಂದು ಯೋಚಿಸಿದೆ. ಈ ಎಲ್ಲ ಗುಣಗಳು ಪಂಜಾಬ್ ತಳಿಯಲ್ಲಿ ಇರುವುದು ಕಂಡುಬಂತು. ಆ ತಳಿಯನ್ನೇ ಸಾಕಲು ಮುಂದಾದೆ. ಕಳೆದ 12 ವರ್ಷಗಳ ಅನುಭವ ಪಡೆದ ಮೇಲೆ ತುಂಬಾ ಒಳ್ಳೆಯ ಲಾಭ ಕಾಣುತ್ತಿದ್ದೇನೆ' ಎಂದು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ ಶ್ರೀನಿವಾಸ್.

ಈಗ ಪ್ರತಿದಿನ 250 ಲೀ ಆಡಿನ ಹಾಲು ಉತ್ಪಾದನೆ ಆಗುತ್ತದೆ. ಪ್ರತಿ ಲೀಟರ್ ಹಾಲನ್ನು ಚೆನ್ನೈನಲ್ಲಿ 500 ರು.ನಂತೆ, ಬೆಂಗಳೂರಿನಲ್ಲಿ 400 ರು. ನಂತೆ ಮಾರಾಟ ಮಾಡುತ್ತಾರೆ. ತುಪ್ಪವನ್ನು 4 ಸಾವಿರ ರು. ಗೆ ಮಾರುತ್ತಾರೆ. ಹಾಲು ಕೆಡದಂತೆ ಸಂರಕ್ಷಿಸುವ ತಂತ್ರಜ್ಞಾನವನ್ನೂ ಅಳವಡಿಸಿಕೊಂಡಿದ್ದಾರೆ. ಮೇಕೆಗಳ ಮಾರಾಟ, ಗೊಬ್ಬರ ಮಾರಾಟದಲ್ಲೂ ಹೆಚ್ಚು ಲಾಭ ಗಳಿಸುತ್ತಿದ್ದಾರೆ.

ಮೊದಲಿಗೆ ಮೇಕೆ ಹಾಲನ್ನು ಮಾರುಕಟ್ಟೆಗೆ ಪರಿಚಯಿಸುವ ಉದ್ದೇಶದಿಂದ ಬೆಂಗಳೂರಿನ ಲಾಲ್ ಬಾಗ್, ಕಬ್ಬನ್ ಪಾರ್ಕ್‌ಗಳಲ್ಲಿ ಮೂರು ತಿಂಗಳ ಕಾಲ 500 ಲೀ ಹಾಲು ಉಚಿತವಾಗಿ ಹಂಚಿ ಮಾರುಕಟ್ಟೆ ಮಾಡಿದ್ದಾರೆ. ಈಗ ಲೀಟರ್‌ಗೆ 400 ರು.ನಂತೆ ಬೆಂಗಳೂರಲ್ಲಿ ಆಡಿನ ಹಾಲು ಕೊಡುತ್ತಿದ್ದೇನೆ. ಹಾಲು ಸರಬರಾಜಿಗೆ ಪ್ರತಿ ಲೀಟರ್‌ಗೆ 200 ರು.ಗಳಷ್ಟು ಖರ್ಚು ಬರುತ್ತಿದೆ. ಉಳಿದಂತೆ ಲೀಟರ್‌ನಲ್ಲಿ 200 ರಿಂದ 250 ರು. ಲಾಭ ಬರುತ್ತಿದೆಯಂತೆ.

ಸುಮಾರು 40 ಮಲೆನಾಡು ಗಿಡ್ಡ ಹಸುಗಳನ್ನು ಸಾಕಣೆ ಮಾಡಿರುವ ಇವರು ಅದರಲ್ಲೂ ಯಶಸ್ಸು ಕಂಡಿದ್ದಾರೆ. ಜೊತೆಗೆ ಬಂಡೂರು ತಳಿಯ ಕುರಿಗಳನ್ನೂ ಸಾಕಾಣಿಕೆ ಮಾಡಿದ್ದಾರೆ. ಇವರ ಗೋಟ್ ಫಾರಂಗೆ ಮಹಾರಾಷ್ಟ್ರದ ಕೃಷಿ ಸಚಿವ ಸುನೀಲ್ ಕೇದಾರ್ ತಮ್ಮ ತಂಡದೊಂದಿಗೆ ಭೇಟಿ ನೀಡಿದ್ದಾರೆ. ನೈಜೀರಿಯಾದ ರೈತರು, ಮಿಜೋರೋಂನ ಪಶು ಸಂಗೋಪನೆ ಇಲಾಖೆ ಅಧಿಕಾರಿಗಳು, ಭೂತಾನ್ ದೇಶದ ರೈತರು ಭೇಟಿ ಕೊಟ್ಟು ಅಧ್ಯಯನ ಮಾಡಿದ್ದಾರೆ.



ರೈತರು ಅರ್ಜಿ ಸಲ್ಲಿಸಿ ಪ್ರಶಸ್ತಿಗಳನ್ನು ಪಡೆಯುವಂಥಾ ಸಂಸ್ಕೃತಿ ಹೋಗಬೇಕು. ಅರ್ಜಿ ಸಲ್ಲಿಸಿ ಪ್ರಶಸ್ತಿ ಪಡೆಯುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ, ಆದ್ದರಿಂದ ಸಾಧನೆ ಮಾಡಿದ್ದರೂ ಮಹತ್ವದ ಪ್ರಶಸ್ತಿ ಬಂದಿಲ್ಲ. ಕನ್ನಡಪ್ರಭ, ಸುವರ್ಣನ್ಯೂಸ್ ನನ್ನ ಸಾಧನೆ ಗುರುತಿಸಿ ಪುರಸ್ಕರಿಸಿರುವುದು ಖುಷಿ ತಂದಿದೆ.

• ಶ್ರೀನಿವಾಸ್



All about orchids in new book

Orchids are stellar and omnipresent, says new book that documents the plant group





A Checklist of the Orchidaceae of India provides detailed taxonomic status and distribution of 1,234 species of one of the largest groups of beautiful flowering plants. ▪ SPECIAL ARRANGEMENT

SPECIAL CORRESPONDENT
BENGALURU

Prized for their beauty and often symbolised as luxurious, orchids have captivated nature lovers and gardening enthusiasts. But orchids are stellar and omnipresent, says a new book that documents the plant group.

The newly released inventory of India's orchids, 'A Checklist of the Orchidaceae of India,' was published by the Missouri Botanical Garden. André Schuiteman, B. R. Kailash (a researcher at the Bengaluru-based Ashoka Trust for Research in Ecology and the Environment), and Uttam Babu Shrestha are the authors.

The project is supported by the Department of Biotechnology, India, SMS Family Foundation, Chris Davidson Fund, Principal Scientific Advisor to the Prime Minister of India, National Biodiversity Mission and Human Wellbeing, and the Government of India.

"The comprehensive book on the orchids provides detailed taxonomic status and distribution of 1234 species of one of the largest groups of beautiful flowering plants. This book opens up a large unexplored diversity of orchids in India and is a treasure for not just taxonomists but for all interested in orchids." said G. Ravikanth, Acting Director of ATREE.

An ATREE release explained that orchids constitute a "stellar" plant group among the flowering plants known for their spectacular morphological features by colour, shape, and size. "Evolutionarily and ecologically, orchids are a fascinating plant group due to their unique and diverse habitats ranging from dark wet forest understory to forest canopy as epiphytes. Orchids' mutualistic association with fungal partners could be one of the major reasons they thrive in diverse habitats," the release said.

Similarly, their pollination mechanism is yet another enigmatic evolutionary feature that makes them omnipresent, it said.

CONTINUED ON ▸ PAGE 3

11-01-2022 Hindu Pg 01

11-01-2022 Hd Pg 04



ಯಾವುದೇ ಒಂದು ಉತ್ಪನ್ನದ ಅತಿದೊಡ್ಡ ಉತ್ಪಾದಕ ಹಾಗೂ ರಫ್ತುದಾರ ರಾಷ್ಟ್ರವು ಅದೇ ಉತ್ಪನ್ನದ ದೇಶೀಯ ಪೂರೈಕೆಯ ಕೊರತೆ ಅನುಭವಿಸುವುದು ತೀರ ವಿರಳ. ಒಂದು ವೇಳೆ ಅಂತಹ ಕೊರತೆ ಎದುರಾದರೆ ಆ ರಾಷ್ಟ್ರದ ಸರ್ಕಾರವು ಅಂತಹ ಉತ್ಪನ್ನಗಳ ಮೇಲಿನ ಬೆಲೆ ನಿಯಂತ್ರಣ, ರಫ್ತು ನಿರ್ಬಂಧಗಳನ್ನು ಅನುಸರಿಬೇಕಾದ ಪರಿಸ್ಥಿತಿ ಎದುರಾಗುತ್ತದೆ . ಈಗ ಇಂತಹದ್ದೇ ಪರಿಸ್ಥಿತಿ ಎದುರಿಸುತ್ತಿರುವುದು ಇಂಡೋನೇಷ್ಯಾ ! ತಾಳೆ ಎಣ್ಣೆಯ ಅತಿದೊಡ್ಡ ಉತ್ಪಾದಕನಾದ ಇಂಡೋನೇಷ್ಯಾದಲ್ಲೇ ತಾಳೆ ಎಣ್ಣೆಗೆ ಕೊರತೆ ಎದುರಾಗಿರುವುದೇಕೆ ? ಭಾರತದ ಮೇಲೆ ಇದರ ಪರಿಣಾಮವೇನು ಎಂಬುದರ ವಿವರ ಇಲ್ಲಿದೆ.

ತಾಯ್ನಾಡಿನಲ್ಲೇ ತಾಳೆ ಎಣ್ಣೆಗೆ ತಡಕಾಟ

ಅತಿದೊಡ್ಡ ಉತ್ಪಾದಕ ರಾಷ್ಟ್ರ

2021-22 (ಅಕ್ಟೋಬರ್-ಸೆಪ್ಟೆಂಬರ್)ರ ಅವಧಿಯಲ್ಲಿ ದ್ವೀಪರಾಷ್ಟ್ರವು 45.5ದಶಲಕ್ಷ ಟನ್ ತಾಳೆಎಣ್ಣೆ ಉತ್ಪಾದಿಸಲಿದೆ ಎಂದು ಅಮೆರಿಕ ಕೃಷಿ ಇಲಾಖೆ (ಯುಎಸ್‌ಡಿಎ) ಅಂದಾಜಿಸಿದೆ. ಈ ಪ್ರಮಾಣವು ಒಟ್ಟು ಜಾಗತಿಕ ಉತ್ಪಾದನೆಯ ಶೇ.60ರಷ್ಟಿದ್ದು, ಇದರ ನಂತರದ ಸ್ಥಾನ ಮಲೇಷ್ಯಾ (18.7 ದಶಲಕ್ಷ ಟನ್) ಪಡೆದುಕೊಂಡಿದೆ. ಅಲ್ಲದೇ, ಇಂಡೋನೇಷ್ಯಾ ವಿಶ್ವದ ನಂಬರ್ 1 ತಾಳೆ ಎಣ್ಣೆ ರಫ್ತು ರಾಷ್ಟ್ರವಾಗಿದೆ.

ದೇತಿ ಬೆಲೆ ಹೆಚ್ಚಳ

ಮಾರ್ಚ್ 2021 ಮತ್ತು ಮಾರ್ಚ್ 2022 ರ ನಡುವೆ ಇಂಡೋನೇಷ್ಯಾದಲ್ಲಿ ಬ್ರಾಂಡೆಡ್ ತಾಳೆ ಎಣ್ಣೆಯ ಬೆಲೆ ಲೀಟರ್‌ಗೆ ಸುಮಾರು 14,000 ಇಂಡೋನೇಷಿಯನ್ ರುಪಿಯಾ (14,000 ಐಡಿಆರ್ = 1 ಅಮೆರಿಕ ಡಾಲರ್/74 ರೂ.) ನಿಂದ 22,000 ಐಡಿಆರ್‌ಗೆ ಏರಿಕೆಯಾಗಿದೆ. ಫೆಬ್ರವರಿ 1ರಂದು ಇಂಡೋನೇಷ್ಯಾ ಸರ್ಕಾರ ಬಿಲ್ಲರ್ ಬೆಲೆಗಳ ಮೇಲೆ ನಿರ್ಬಂಧ ವಿಧಿಸಿದ್ದು, ಪ್ರೀಮಿಯಂ 1-, 2- ಅಥವಾ 5-ಲೀಟರ್ ಪ್ಯಾಕ್ ಎಣ್ಣೆಗೆ 14,000 ಐಡಿಆರ್ ಹಾಗೂ ಸಾಮಾನ್ಯ ಎಣ್ಣೆಯ ಕನಿಷ್ಠ-1-ಲೀಟರ್ ಕಂಟೈನರ್‌ಗಳಿಗೆ 13,500 ಐಡಿಆರ್ ನಿಗದಿಪಡಿಸಿದೆ. ಬೆಲೆ ಏರಿಕೆಯು ಸೂಪರ್ ಮಾರ್ಕೆಟ್‌ನಲ್ಲಿ ಎಣ್ಣೆಯ ಲಭ್ಯತೆಯನ್ನು ಕಡಿಮೆಯಾಗಿಸಿದ್ದು, ಗ್ರಾಹಕರು 1ಅಥವಾ 2 ಪ್ಯಾಕ್ ಎಣ್ಣೆ ಖರೀದಿಸಲು ಕೂಡ ಸರತಿಯಲ್ಲಿ ದೀರ್ಘಕಾಲದವರೆಗೆ ನಿಲ್ಲುವಂತಾಗಿದೆ. ದೇಶೀಯ ಬೆಲೆ ನಿಯಂತ್ರಣಗಳಲ್ಲದೆ, ರಫ್ತುದಾರರು ತಮ್ಮ ಯೋಜಿತ ಸರಕುಗಳ ಶೇ.30ಅನ್ನು ದೇಶೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ಸರ್ಕಾರವು ಕಡ್ಡಾಯಗೊಳಿಸಿದೆ.

ಕಾರಣಗಳೇನು?

1 ರಷ್ಯಾ-ಉಕ್ರೇನ್ ಬಿಕ್ಕಟ್ಟಿನಿಂದಾಗಿ ಎದುರಾಗಿರುವ ಇತರೆ ಖಾದ್ಯ ತೈಲ ವಿಶೇಷವಾಗಿ ಸೂರ್ಯಕಾಂತಿ ಹಾಗೂ ಸೋಯಾಬೀನ್ ತೈಲಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು ಈಗ ಆ ತೈಲದ ಪೂರೈಕೆಯನ್ನು ತಾಳೆ ಎಣ್ಣೆಯೇ ಸರಿದೂಗಿಸಬೇಕಿದೆ. ಉಕ್ರೇನ್ ಮತ್ತು ರಷ್ಯಾ ಒಟ್ಟಾಗಿ ಸೂರ್ಯಕಾಂತಿ ಎಣ್ಣೆಯ ಜಾಗತಿಕ ವ್ಯಾಪಾರದಲ್ಲಿ 80% ನಷ್ಟು ಭಾಗವನ್ನು ಹೊಂದಿದೆ. ಈಗ ಬಿಕ್ಕಟ್ಟಿನಿಂದಾಗಿ ಈ ತೈಲಗಳ ಪೂರೈಕೆ ಸ್ಥಗಿತ ಗೊಂಡಿದೆ. ದಕ್ಷಿಣ ಅಮೆರಿಕಾದಲ್ಲಿ ಶುಷ್ಕ ಹವಾಮಾನದಿಂದಾಗಿ ಸೋಯಾಬೀನ್ ಎಣ್ಣೆಯು ಪೂರೈಕೆ ಸಮಸ್ಯೆ ಎದುರಿಸುತ್ತಿದೆ.

2 ಇಂಡೋನೇಷ್ಯಾದಲ್ಲಿ ಖಾದ್ಯ ತೈಲವಾಗಿ ಮಾತ್ರವಲ್ಲದೇ, ತಾಳೆ ಎಣ್ಣೆಯನ್ನು ಜೈವಿಕ ಇಂಧನವಾಗಿಯೂ ಬಳಸಲಾಗುತ್ತಿದೆ. ಸರ್ಕಾರ 2020ರಿಂದ ಇಂಧನ ಆಮದನ್ನು ಕಡಿತಗೊಳಿಸಲು ತಾಳೆ ಎಣ್ಣೆ ಜತೆಗೆ ಶೇ.30 ಡೀಸೆಲ್ ಮಿಶ್ರಣವನ್ನು ಕಡ್ಡಾಯಗೊಳಿಸಿದೆ. ಒಟ್ಟಾರೆ ತಾಳೆ ಎಣ್ಣೆಯ ದೇತಿ ಬಳಕೆಯೇ 17.1 ದಶಲಕ್ಷ ಟನ್ ಆಗಿದ್ದು, ಈ ಪೈಕಿ 7.5 ದಶಲಕ್ಷ ಟನ್ ಜೈವಿಕ ಇಂಧನಕ್ಕೆ ಹಾಗೂ 9.6 ದಶಲಕ್ಷ ಟನ್ ಗೃಹ ಬಳಕೆಯಾಗುತ್ತಿದೆ.

ಭಾರತದ ಮೇಲಿನ ಪರಿಣಾಮವೇನು ?

ಭಾರತವು ವಿಶ್ವದ ಅತಿದೊಡ್ಡ ಖಾದ್ಯತೈಲಗಳ ಆಮದುದಾರನಾಗಿದ್ದು, ಈ ಪೈಕಿ ಸಿಂಹಪಾಲು ತಾಳೆ ಎಣ್ಣೆಯದ್ದೇ ಆಗಿದೆ. ಒಟ್ಟು ವಾರ್ಷಿಕ 14-15 ದಶಲಕ್ಷ ಟನ್ ಆಮದಿನ ಪೈಕಿ ತಾಳೆ ಎಣ್ಣೆ 8-9 ದಶಲಕ್ಷ ಟನ್, 3-3.5 ದಶಲಕ್ಷ ಟನ್ ಸೋಯಾಬೀನ್, 2.5 ದಶಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಪಾಲು ಹೊಂದಿದೆ. ಇಂಡೋನೇಷ್ಯಾ ಭಾರತದ ಅತಿದೊಡ್ಡ ತಾಳೆ ಎಣ್ಣೆ ಪೂರೈಕೆದಾರನಾಗಿದೆ. ದೇತಿ ಪೂರೈಕೆ ಕೊರತೆಯಿಂದಾಗಿ ಸರ್ಕಾರ ತೈಲದ ರಫ್ತು ಸುಂಕ ಹೆಚ್ಚಿಸಿದ್ದು, ಪ್ರತಿ ಟನ್ ತಾಳೆ ಎಣ್ಣೆಯ ಬೆಲೆ 175 ಡಾಲರ್‌ಗಳಿಂದ 375 ಡಾಲರ್ ಗೆ ಏರಿಕೆಯಾಗಿದೆ. ಇದು ಭಾರತದ ಗ್ರಾಹಕರ ಮೇಲೂ ಪರಿಣಾಮ ಬೀರಲಿದೆ.